# ಪುರಸಭಾ ಕಾರ್ಯಾಲಯ, ಚಂದಾಪುರ

**ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 099**

Email: itstaff_ulb_chandapura@yahoo.com Phone No: 080 – 27832411

ಸಂಖ್ಯೆ:ಪು.ಕಾ.ಚಂ/ತಾಂ.ಶಾ/ಸಿ.ಆರ್/34/2021–22 ದಿನಾಂಕ:12/05/2021.

## "ನಿರಾಕ್ಷೇಪಣಾ ಪತ್ರ"

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಅತ್ತಿಬೆಲೆ ಹೋಬಳಿ, ಚಂದಾಪುರ ಪುರಸಭೆ ವ್ಯಾಪ್ತಿಯ ಚಂದಾಪುರ ಗ್ರಾಮದ ಸರ್ವೆ ನಂ.2/2ರಲ್ಲಿನ ಒಟ್ಟು ವಿಸ್ತೀರ್ಣ:2 ಎಕರೆ ಪೈಕಿ 1 ಎಕರೆ 09 ಗುಂಟೆ ಕೃಷಿ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ಸಂಖ್ಯೆ:**ALN(A)SR89/2012-13** ದಿನಾಂಕ:24/07/2012 ರಂತೆ ಶ್ರೀಮತಿ.ಉಮಾವತಿ ಕೋಂ ಶ್ರೀ.ಕೃಷ್ಣಾರೆಡ್ಡಿ ಇವರ ಹೆಸರಿಗೆ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುತ್ತದೆ. ಸದರಿ ಜಮೀನಿನಲ್ಲಿ ವಾಸಕ್ಕಾಗಿ ವಸತಿ ಸಮುಚ್ಚಯ ಕಟ್ಟಡ ನಿರ್ಮಿಸಲು ಉದ್ದೇಶಿಸಿರುವುದಕ್ಕೆ ಹಾಗೂ ಸಾರ್ವಜನಿಕ ಸಂಪರ್ಕ ರಸ್ತೆ 18.30 ಮೀಟರ್ ಇದ್ದು ಈ ಸಂಬಂಧ ನಿರಾಕ್ಷೇಪಣಾ ಪತ್ರ ನೀಡುವಂತೆ ಕೋರಿರುವುದು ಸರಿಯಷ್ಟೇ,

ಮುಂದುವರೆದು ತಮ್ಮ ಅರ್ಜಿಯನ್ನು ಪರಿಶೀಲಿಸಲಾಗಿ, ಚಂದಾಪುರ ಗ್ರಾಮದ ಸರ್ವೆ ನಂ.2/2ರಲ್ಲಿನ ಒಟ್ಟು ವಿಸ್ತೀರ್ಣ:2 ಎಕರೆ ಪೈಕಿ 1 ಎಕರೆ 09 ಗುಂಟೆ ಸ್ವತ್ತಿನಲ್ಲಿ ಉದ್ದೇಶಿಸಿರುವ ವಸತಿ ಸಮುಚ್ಚಯದ ಸ್ವತ್ತಿಗೆ 18.30 ಮೀಟರ್ ಸಾರ್ವಜನಿಕ ಸಂಪರ್ಕ ರಸ್ತೆ ಇರುವುದು ಪರಿಶೀಲನೆಯಿಂದ ಕಂಡುಬಂದಿರುತ್ತದೆ. ಸದರಿ ಸ್ವತ್ತಿನಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ, ಈ ಕಛೇರಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ ಹಾಗೂ ಸಕ್ಷಮ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ ಉದ್ದೇಶಿತ ವಸತಿ ಸಮುಚ್ಚಯದ ಕಟ್ಟಡದ ಕಾಮಗಾರಿಗಳು ಪೂರ್ಣಗೊಂಡ ನಂತರ, ಪುರಸಭೆಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಸಂದಾಯ ಮಾಡಿದ ನಂತರ, ಪುರಸಭಾ ಕಾಯ್ದೆಯಂತೆ ನಿಯಮಾನುಸಾರ ಕೌನ್ಸಿಲ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು, ನೀರಿನ ಲಭ್ಯತೆ ಆಧಾರದ ಮೇಲೆ, ನೀರು ಸರಬರಾಜಿಗೆ ಕ್ರಮ ವಹಿಸಲಾಗುತ್ತದೆ ಎಂದು ತಿಳಿಯಪಡಿಸಿ, ನಿರಾಕ್ಷೇಪಣಾ ಪತ್ರ ನೀಡಿದೆ.

ಮುಖ್ಯಾಧಿಕಾರಿ
ಪುರಸಭೆ, ಚಂದಾಪುರ

ರವರಿಗೆ,
ಶ್ರೀಮತಿ.ಉಮಾವತಿ ಕೋಂ ಎಸ್.ಕೃಷ್ಣಾರೆಡ್ಡಿ,
ಚಂದಾಪುರ ಗ್ರಾಮ, ಆನೇಕಲ್ ತಾಲ್ಲೂಕು,
ಬೆಂಗಳೂರು–560099
ದೂ.ಸಂಖ್ಯೆ:9448114661.

Scanned with CamScanner